ಕರ್ನಾಟಕ ವಿಧಾನ ಪರಿಷತ್ತು	
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	689 (812+820)
ಸದಸ್ಯರ ಹೆಸರು:	1) ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) 2) ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ:	20.12.2021
ಉತ್ತರಿಸುವವರು:	ಮಾನ್ಯ ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮದಂತೆ ಮಂಜೂರಾಗಿರುವ ವೃಂದ ಬಲದ ಸಂಖ್ಯೆ ಎಷ್ಟು; (ವೃಂದ ಬಲವನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕ ಮತ್ತು ರಾಜ್ಯ ಪತ್ರದ ಪ್ರತಿಯನ್ನು ನೀಡುವುದು)	ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮದಂತೆ ಮಂಜೂರಾದ ವೃಂದಬಲದ ಸಂಖ್ಯೆ ಈ ಕೆಳಕಂಡಂತಿದೆ. ಕ್ರ.ಸಂ. / ಹುದ್ದೆ / ವೃಂದಬಲ 1 / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ / 200 2 / ಉಪ ಅರಣ್ಯ ಸಂರಕ್ಷಣಾಧಿಕಾರಿ / 42 ರಾಜ್ಯಪತ್ರದ ಪ್ರತಿಯನ್ನು ಅನುಬಂಧದಲ್ಲಿ ಒದಗಿಸಿದೆ.
ಆ)	2003 ರಿಂದ ಈ ದಿನಾಂಕದವರೆಗೆ ಅರಣ್ಯ ಇಲಾಖೆಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯಲ್ಲಿ ಹೊಸದಾಗಿ ಸೃಜನೆಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಈ ಹುದ್ದೆಗಳನ್ನು ವೃಂದ ಬಲಕ್ಕೆ ಸೇರಿಸಿಕೊಂಡು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕ ಮತ್ತು ರಾಜ್ಯ ಪತ್ರದ ಪ್ರತಿಯನ್ನು ನೀಡುವುದು;	2003 ರಿಂದ ಈ ದಿನಾಂಕದವರೆಗೆ ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದಲ್ಲಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ವೃಂದದಲ್ಲಿ ಹೊಸದಾಗಿ ಸೃಜನೆಯಾರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ. ಕ್ರ.ಸಂ. / ಹುದ್ದೆ / ಸಂಖ್ಯೆ 1 / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ / 31 2 / ಉಪ ಅರಣ್ಯ ಸಂರಕ್ಷಣಾಧಿಕಾರಿ / 68 ಹೊಸದಾಗಿ ಸೃಜಿಸಲಾಗಿರುವ ವೃಂದ ಬಲವನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರಿಸಲು ಸೂಕ್ತ ಪ್ರಸ್ತಾವನೆಯನ್ನು ಇಲಾಖಾ ಮುಖ್ಯಸ್ಥರಿಂದ ಪಡೆದು ನಿಯಮಾನುಸಾರ ಕ್ರಮವಹಿಸಲಾಗುವುದು. ತದನಂತರ ರಾಜ್ಯಪತ್ರದಲ್ಲಿ ಪ್ರಕಟಿಸಲಾಗುವುದು.
ಇ)	ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978ರ ಸೆಕ್ಷನ್ 3 ಮತ್ತು 8 ರಂತೆ ರಾಜ್ಯ ಶಾಸಕಾಂಗದಲ್ಲಿ ನಿಯಮಗಳಿಗೆ ಮಂಜೂರಾತಿ	ಕಳೆದ 5 ವರ್ಷದಲ್ಲಿ ವಲಯ ಅರಣ್ಯಾಧಿಕಾರಿ ವೃಂದದಿಂದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದಕ್ಕೆ 164 ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದಿಂದ ಉಪ ಅರಣ್ಯ

	ಪಡೆದು ಹೊಸದಾಗಿ ಸೃಜಿಸಿದ ಹುದ್ದೆಗಳನ್ನು ವೃಂದ ಬಲಕ್ಕೆ ಸೇರಿಸಿಕೊಂಡು, ಕೋಟಾ ನಿಯಮ ಅಳವಡಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸದೇ ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯಲ್ಲಿ ಹೊಸದಾಗಿ ಸೃಜನೆಯಾಗಿರುವ ಹುದ್ದೆಗಳನ್ನು ರಿಕ್ತಸ್ಥಾನವಾಗಿ ಪರಿಗಣಿಸಿ ಕಳೆದ 5 ವರ್ಷದಲ್ಲಿ ನೀಡಿರುವ ಮುಂಬಡ್ತಿಗಳು ಎಷ್ಟು;	ಸಂರಕ್ಷಣಾಧಿಕಾರಿ ವೃಂದದ 102 ಹುದ್ದೆಗಳಿಗೆ ಬಡ್ತಿ ನೀಡಲಾಗಿರುತ್ತದೆ. ಮುಂಬಡ್ತಿಯನ್ನು ಬಡ್ತಿ ಕೋಟಾದಡಿ ಲಭ್ಯವಾಗುವ ಹುದ್ದೆಗಳ ಎದುರಾಗಿ ನಿಯಮಾನುಸಾರ ಪರಿಶೀಲಿಸಿ, ಅರ್ಹತೆ ಮತ್ತು ಜೇಷ್ಠತೆ ಆಧಾರದ ಮೇಲೆ ಬಡ್ತಿ ನೀಡಲಾಗಿದೆ. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 ರ ಪ್ರಕರಣ 3 – ನೇಮಕಾತಿ ಮತ್ತು ಸೇವಾ ಷರತ್ತುಗಳ ವಿನಿಯಮನ (Regulation of recruitment and the conditions of service) ಕ್ಕೆ ಸಂಬಂಧಿಸಿದೆ ಮತ್ತು ಪ್ರಕರಣ 8 – ಇದು ಈ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಬೇಕಾಗಿ ಬಂದ ಕಾರಣಗಳನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಅರಣ್ಯ ಇಲಾಖೆಯಲ್ಲಿ ಯಾವುದೇ ಹೊಸ ವೃಂದದ ಹುದ್ದೆಗಳನ್ನು ಸೃಜಿಸಲಾಗಿಲ್ಲದಿರುವುದರಿಂದ ಮತ್ತು ಅರಣ್ಯ ಇಲಾಖೆಯಲ್ಲಿ ಈಗಾಗಲೇ ವೃಂದ ಮತ್ತು ನೇಮಕಾತಿ ನಿಯಮಗಳು ಅಸ್ತಿತ್ವದಲ್ಲಿರುವುದರಿಂದ ಪುನಃ ನಿಯಮಗಳನ್ನು ರಚನೆ ಮಾಡಲು ವಿಧಾನ ಮಂಡಲದ ಉಭಯಸದನಗಳಲ್ಲಿ ಮಂಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಹೊಸದಾಗಿ ಸೃಜಿಸಲಾಗಿರುವ ಈ ವೃಂದ ಬಲವನ್ನು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಸೇರಿಸಲು ಇಲಾಖಾ ಮುಖ್ಯಸ್ಥರಿಂದ ಪ್ರಸ್ತಾವನೆಯನ್ನು ಪಡೆದು ನಿಯಮಾನುಸಾರ ಕ್ರಮವಹಿಸಲಾಗುವುದು.
ಈ)	ಈ ನಿಯಮಬಾಹಿರ ರಿಕ್ತಸ್ಥಾನ ಪರಿಗಣನೆ ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಇದರಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ಹೊರೆ ಎಷ್ಟು;	ರಿಕ್ತಸ್ಥಾನ ಪರಿಗಣನೆಯಲ್ಲಿ ನಿಯಮ ಬಾಹಿರವಾಗಿರುವುದಿಲ್ಲ. ಆದುದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುವಂತಹ ಸಂದರ್ಭ ಉದ್ಭವಿಸುವುದಿಲ್ಲ.
ಉ)	ಬ್ಲಾಕ್‌ವಾರು ಉದ್ಬವವಾಗಿರುವ ರಿಕ್ತಸ್ಥಾನವನ್ನು ವೃಂದ ಮತ್ತು ನೇಮಕಾತಿ ನಿಯಮದಂತೆ ವಿಂಗಡಿಸದೆ ಮಂಜೂರಾದ ಹುದ್ದೆಯನ್ನು ವಿಂಗಡಿಸಿಕೊಂಡು ಅರಣ್ಯ ಇಲಾಖೆಯಲ್ಲಿ ಮುಂಬಡ್ತಿ ನೇಮಕಾತಿ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬ್ಲಾಕ್‌ವಾರು ಉದ್ಬವವಾಗಿರುವ ರಿಕ್ತಸ್ಥಾನವನ್ನು ವೃಂದ ಮತ್ತು ನೇಮಕಾತಿ ನಿಯಮದಂತೆ ವಿಂಗಡಿಸಿಯೇ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದಕ್ಕೆ ಮುಂಬಡ್ತಿ ನೀಡಲಾಗಿದೆ.
ಊ)	ಬಂದಿದ್ದಲ್ಲಿ ಮಂಜೂರಾದ ಹುದ್ದೆಯನ್ನು ವಿಂಗಡಿಸಿಕೊಂಡು ಅರಣ್ಯ ಇಲಾಖೆಯಲ್ಲಿ ನೇರ ಮತ್ತು ಮುಂಬಡ್ತಿ ಪ್ರಕ್ರಿಯೆ ಕೈಗೊಳ್ಳಲು ನೀಡಿರುವ ಆದೇಶದ ಪ್ರತಿಯನ್ನು ನೀಡುವುದು;	ಉದ್ಭವಿಸುವುದಿಲ್ಲ.

ಕಡತ ಸಂಖ್ಯೆ: ಅಪಜೀ 298 ಅಪಸೇ 2021 (ಇ)

(ಉಮೇಶ ವಿ. ಕತ್ತಿ)

ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು

ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.